ಅಪಶಕುನದ ಮಾತಾಡುತ್ತಿದ್ದೀರಿ" ಎಂದು ರೇಗಿದ. ಹಕ್ಕಿಗಳಿಲ್ಲದ ಸತ್ತಾಲನ್ನು ಕಲ್ಪಿಸಿಕೊಳ್ಳುವುದು ಕೂಡ ಅವರಿಗೆ ಕಷ್ಟ.

ಇಲ್ಲಿನ ಜನಕ್ಕೆ ಪುಕ್ಕಟ್ಟೆಯಾಗಿ ಗಾಂಜಾ ಸೊಪ್ಪು ಸಿಗುತ್ತದೆ. ಈ ಕಾರಣದಿಂದ ಇಲ್ಲಿನ ಮಕ್ಕಳಿಂದ ಹಿಡಿದು ವೃದ್ಧರ ತನಕದ ಹಲ್ಲುಗಳು ಕೂಡ ಕರಿ ಇದ್ದಿಲ ಚೂರುಗಳಾಗಿವೆ. ಹೆಚ್ಚು ಕೃಷಿ ಚಟುವಟಿಕೆಗಳೇ ಇಲ್ಲದ ಇಲ್ಲಿನ ಜನ ಪ್ರವಾಸಿಗರ ಆಸೆ ಆಕಾಂಕ್ಷೆಗಳ ಈಡೇರಿಸುವ ಸ್ವೆಟರ್ ಅಂಗಡಿಗಳು, ಬಾಡಿಗೆ ಕಾರುಗಳು, ಹೊಟೆಲ್ಲು, ಲಾಡ್ಜು, ಇತ್ಯಾದಿ ಮಾಡಿಕೊಂಡಿದ್ದಾರೆ. ಪಕ್ಷಿಗಳಿಗಾಗಿ ಕ್ಯಾಮೆರಾ ಹೊತ್ತು ವಿಚಿತ್ರ ಪೋಷಾಕಿನಲ್ಲಿ ಟಳಾಯಿಸುವ ನಮ್ಮಂಥವರ ದೇಖರೇಕಿ ಮಾಡುವ ನ್ಯಾಚುರಲಿಸ್ಟ್ ಉದ್ಯೋಗ ಹುಡುಕಿಕೊಂಡಿರುವ ಜನ ತುಸು ಹೆಚ್ಚೇ ಇದ್ದಾರೆ.

ವಲಸೆ ಪಕ್ಷಿಗಳಿಂದ ಹಿಡಿದು ಸ್ಥಳೀಯ ಖಗಗಳ ತನಕದ ಜೀವನ ಪದ್ಧತಿ ಇವರಿಗೆ ಬಾಯಿಪಾಠ. "ಹಮಾರ ರೋಟಿ ಔರ್ ಧೋತಿ ಇಸ್ ಚುಡಿಯೋಂಕಿ ಆಂಚಲ್‌ಮೆ ಹೈ ಸಾಬ್"' (ನಮ್ಮ ರೊಟ್ಟಿ ಮತ್ತು ಬಟ್ಟೆ ಈ ಹಕ್ಕಿಗಳ ಮಡಿಲಲ್ಲಿ ಇದೆ ಸ್ವಾಮಿ) ಎಂದು ಒಂದೇ ಮಾತಿನಲ್ಲಿ ನಮ್ಮ ಬಾಯಿ ಕಟ್ಟಿಸುತ್ತಾರೆ. ಇವರ ಬದುಕನ್ನು ಪೊರೆಯುತ್ತಿರುವ ಪಕ್ಷಿಗಳ ಬಗ್ಗೆ ಇಲ್ಲಿನ ಜನರಿಗೆ ಗೌರವ ಮತ್ತು ಹೆಮ್ಮೆ ಇದೆ. ನಾವು ಹಕ್ಕಿ ಪಕ್ಷಿಗಳಿಗೆ ಕಾಳು ನೀರು ಕೊಟ್ಟು ಕಾಪಾಡಬೇಕು ಎಂದು ಶಂಖ ಊದುತ್ತೇವೆ. ಅವುಗಳ ರಕ್ಷಣೆ ನಮ್ಮ ಹೊಣೆ ಎನ್ನುತ್ತೇವೆ. ವಿಚಿತ್ರ ನೋಡಿ, ಇಲ್ಲಿ

